ಅಧ್ಯಕ್ಷರು :- ಟೈಮ್ ವೇಸ್ಟ್ ಆಗುವುದು ಬೇಡ. ಖರ್ಗೆಯವರೆ ದಯಮಾಡಿ ಸಹಕರಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಏನಾದರೂ ತೆಗೆಯುವುದು ಎಂದರೆ ಏನು? ಇದು ಏನಾದರೂ ವಿಷಯವೇ? ಒಬ್ಬ ರಾಜ್ಯಸಭಾ ಸದಸ್ಯ, ನಿಮ್ಮ ಲೀಡರ್, ಯಾರ ಕಾಲಿಗೆ ಹೋಗಿ ಬೀಳುತ್ತಿದ್ದೀರಿ, ಯಾರ ಚಪ್ಪಲಿಯನ್ನು ತಲೆಯ ಮೇಲೆ ಇಟ್ಟುಕೊಂಡು ಓಡಾಡಿದಿರಿ, ಆ ರಾಜ್ಯಸಭಾ ಸದಸ್ಯರು ಇವತ್ತು ಹೇಳಿದರೆ, ಅದನ್ನು ಲಘುವಾಗಿ ಎಂದು ಹೇಳಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ :- ನಮ್ಮ ಪಕ್ಷಕ್ಕೆ ಸಂಬಂಧಪಟ್ಟಂಥ ವಿಚಾರಗಳನ್ನು ನಾವೇ ಚರ್ಚೆ ಮಾಡಿಕೊಳ್ಳುತ್ತೇವೆ.

Sri. M. Mallikharjuna Kharge : Yes, I have got every right. ಒಬ್ಬ ರಾಜ್ಯಸಭಾ ಸದಸ್ಯರು ಇವತ್ತು ಹೇಳಿದ ಮೇಲೆ I have to raise it.

MR. SPEAKER : It is alright.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದು ಕೆಲಸಕ್ಕೆ ಬರಲಾರದ ವಿಷಯ ಎಂದೆ what does it mean ?... ಇದು ಕೆಲಸಕ್ಕೆ ಬರಲಾರದ್ದು ಎಂದರೆ ಏನು? ತಾವು ಕೆಲಸಕ್ಕೆ ಬರಲಾರದ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರೋ?.

MR. SPEAKER : Alright, the matter is closed.

SRI. H. SHIVAPPA : Freedom of speech/expression is not absolute right. It is subjected to reasonable restriction. Freedom is not a licence. They are not absolute rights.

MR. SPEAKER : Mr. Nanje Gowda to raise.

(ಋ) ಸುಪ್ರೀಂ ಕೋರ್ಟಿನಿಂದ ನಮ್ಮ ಮತ್ತು ತಮಿಳುನಾಡು ಲಾಯರ್‌ಗಳಿಗೆ ಸಲಹೆ.

ಶ್ರೀ ಹೆಚ್ ಎನ್. ನಂಜೇಗೌಡ ಬಸವನಗುಡಿ :- ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಸುಪ್ರೀಂ ಕೋರ್ಟ್‌ನವರು ನಮ್ಮ ಮತ್ತು ತಮಿಳುನಾಡು ಲಾಯರ್‌ಗಳಿಗೆ ಸಲಹೆ ಕೊಟ್ಟಿದ್ದಾರೆ, ಸೂಚನೆ ಕೊಟ್ಟಿದ್ದಾರೆ. ಇದು ಒಂದು ಪ್ರಮುಖವಾದ ಬೆಳವಣಿಗೆ. ಅಂದರೆ ಇದರ ಬಗ್ಗೆ ಚರ್ಚೆಯಾಗಬೇಕೆಂದು ನಾನು ಹೇಳುತ್ತಿಲ್ಲ. ಆ ಕೋರ್ಟ್ ಆದೇಶದಲ್ಲಿ ಇನ್ನೊಂದು ಏನು ಬರೆದಿದ್ದಾರೆಂದರೆ, ಇದು ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು,

ಮಾತುಕತೆ ಮಾಡುವುದಕ್ಕೆ ಒಂದು ಕಡೆ ಸೇರಬೇಕು, ಅದು ಯಾವಾಗ ಸೇರುತ್ತೀರಿ ಎನ್ನುವಂಥ ದಿನಾಂಕವನ್ನು ಈ ದಿನವೇ ತಿಳಿಸಬೇಕೆಂದು ಕೇಳಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಈ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಏನು ನಡೆಯಿತು? ನಮ್ಮ ಕೌನ್ಸಿಲ್ ಮುಖಾಂತರ ಇವರಿಗೆ ಏನು ಸೂಚನೆ ಗೊತ್ತಿದೆ? ಇಲ್ಲಿಯ ಮುಖ್ಯಮಂತ್ರಿಯವರಿಗೂ ತಮಿಳುನಾಡಿನ ಮುಖ್ಯಮಂತ್ರಿಯವರಿಗೂ ಮಾತುಕತೆ ಏನಾದರೂ ಫೋನ್ ಮೂಲಕ ನಡೆದಿದೆಯೇ? ಈ ವಿಚಾರದಲ್ಲಿ ಸರ್ಕಾರದ ನಿಲುವು ಏನು? ಸಾಮಾನ್ಯವಾಗಿ ಇಂತಹ ಪ್ರಮುಖವಾದ ಬೆಳವಣಿಗೆಯಾದಾಗ ಸರ್ಕಾರ ತಾನೇ ತಾನಾಗಿ ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಆದರೆ ಸರ್ಕಾರ ಹೇಳಿಕೆಯನ್ನು ಕೊಡಲಿಲ್ಲ. ಅದಕ್ಕೋಸ್ಕರ ಇದು ಜನಗಳಲ್ಲಿ ಕಳವಳವನ್ನು ಕೂಡ ತರುತ್ತದೆ. ಇದನ್ನೆಲ್ಲ ನಿವಾರಣೆ ಮಾಡುವ ದೃಷ್ಟಿಯಿಂದ ಏನು ನಡೆಯಿತು? ಸರ್ಕಾರದ ನಿಲುವು ಏನು ಎನ್ನತಕ್ಕಂಥದ್ದನ್ನು ಸ್ಪಷ್ಟಪಡಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜೇಗೌಡರು ಹೇಳಿದ ವಿಚಾರದ ಜೊತೆಗೆ ಆಲಮಟ್ಟಿ ಬಗ್ಗೆ ಆಂಧ್ರದ ಹೈಕೋರ್ಟು.....

ಅಧ್ಯಕ್ಷರು :- ದಯಮಾಡಿ ಮಾನ್ಯ ನಂಜೇಗೌಡರು ಮಾತನಾಡಿದ ವಿಷಯಕ್ಕೆ ಸಂಬಂಧಿಸಿದ ಹಾಗೆ ಇದಕ್ಕೆ ಮಾತ್ರ ಕನ್‌ಫೈನ್ ಆಗಿ ಮಾತನಾಡಿ. ಆಲಮಟ್ಟಿ ಬಗ್ಗೆ ಬೇರೆ ದಿವಸ ತೆಗೆದುಕೊಳ್ಳೋಣ. ಶೂನ್ಯ ವೇಳೆಯ ಸಮಯ ಹಾಳಾಗಬಾರದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :- ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳನ್ನು ಕಾವೇರಿ ಬಗ್ಗೆ ಮಾತುಕತೆ ಕರೆದಿರತಕ್ಕಂಥದ್ದು ಅದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಎರಡೂ ರಾಜ್ಯದ ಮುಖ್ಯಮಂತ್ರಿಗಳು ಮಾತುಕತೆಯಾಡಿ ಈ ಕಾವೇರಿ ನೀರಿನ ಹಂಚಿಕೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಸಲಹೆಯನ್ನು ಸರ್ವೋಚ್ಚ ನ್ಯಾಯಾಲಯ ಕೊಟ್ಟಿದೆ. ಆದರೆ ಆದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು? ಮತ್ತು ಈ ಬಗ್ಗೆ ತಮಿಳುನಾಡು ಸರ್ಕಾರದ ನಿಲುವು ಏನು? ಈಗಾಗಲೇ ತಮಿಳುನಾಡು ಸರ್ಕಾರದಿಂದ ನಮ್ಮ ಸರ್ಕಾರಕ್ಕೆ ಏನಾದರೂ ಆದೇಶ ಬಂದಿದೆಯೇ? ಅಥವಾ ಅವರಿಂದ ಪತ್ರ ಬಂದಿದೆಯೇ? ತಮಿಳುನಾಡು ಮುಖ್ಯಮಂತ್ರಿಗಳು ಮತ್ತು ನಮ್ಮ ಮುಖ್ಯಮಂತ್ರಿಗಳು ಮಾತುಕತೆಗೆ ಸಿದ್ಧರಾಗಿದ್ದಾರೆಯೇ, ಇದನ್ನು ಸ್ಪಷ್ಟಪಡಿಸಬೇಕು. ಶ್ರೀ ನಂಜೇಗೌಡರು ಹೇಳದಂತೆ ಇದರ ಬಗ್ಗೆ ಸರ್ಕಾರದಿಂದ ಮೊದಲೇ ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಮಾತುಕತೆ ಏನೇ ಆದರೂ ಕರ್ನಾಟಕಕ್ಕೆ ಯಾವುದೇ ರೀತಿಯಾದ ಅನ್ಯಾಯ ಆಗದ ರೀತಿಯಲ್ಲಿ ಮಾತುಕತೆಯಾಗಬೇಕು. ಇದು ಒಳ್ಳೆಯ ಒಂದು ಸೂಚನೆ. ಮಾತುಕತೆಯ ಮೂಲಕ ಕಾವೇರಿ ನೀರಿನ ವಿವಾದ ಬಗೆಹರಿಯಬೇಕೆಂದು ಮೊದಲಿನಿಂದಲೂ ನಾವು ಹೇಳುತ್ತಿದ್ದೇವೆ. ಮಾತುಕತೆಯನ್ನು ಬಿಟ್ಟು ನ್ಯಾಯಮಂಡಳಿಯ ಮೂಲಕ ಬಗೆಹರಿಸಿಕೊಳ್ಳುವುದು ಬೇಡ ಎನ್ನತಕ್ಕಂಥದ್ದು ನಾನು ಮೊದಲಿನಿಂದಲೂ ಹೇಳುತ್ತಿರುವುದು ತಮಗೆ ಗೊತ್ತಿದೆ. ಆದ್ದರಿಂದ ಮಾತುಕತೆಗೆ ಇದು ಒಂದು ಒಳ್ಳೆಯ ಸಂದರ್ಭ ಎಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತೇನೆ. ಸರ್ವೋಚ್ಚ ನ್ಯಾಯಾಲಯದ

ಸಂಪೂರ್ಣವಾದಂಥ ತೀರ್ಪಿನ ಪಾಠ ಏನು ಎನ್ನತಕ್ಕಂಥದ್ದನ್ನು ಈ ಸದನದ ಮುಂದೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಒಂದು ಸಂತೋಷದ ಸಂಗತಿ ಏನೆಂದರೆ ಬಹಳ ವರ್ಷಗಳಿಂದ ಈ ಮನೆಯಲ್ಲಿ ಸರ್ವಾನುಮತದಿಂದ ನಾವು ಏನು ನಿರ್ಣಯ ತೆಗೆದುಕೊಂಡಿದ್ದೆವು ಆದಕ್ಕೆ ಹತ್ತಿರ ಹತ್ತಿರ ಬರುವ ರೀತಿಯಲ್ಲಿ ಸುಪ್ರೀಂ ಕೋರ್ಟಿನವರ ಒಂದು ಸಲಹೆ ಇದ್ದ ಹಾಗೆ ಕಾಣುತ್ತದೆ. ಏಕೆಂದರೆ ಹಾಲಿ ಟ್ರಿಬ್ಯುನಲ್ ಅಧ್ಯಕ್ಷರು ರಾಜೀನಾಮೆ ಕೊಟ್ಟಿರುವುದರಿಂದ ಎರಡೂ ರಾಜ್ಯದವರು ಮಾತುಕತೆಯ ಮೂಲಕ ಆದಷ್ಟು ಬೇಗ ಇದನ್ನು ಬಗೆಹರಿಸಿಕೊಳ್ಳಿ ಎನ್ನುವ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಒಂದೇ ಒಂದು ವಿನಂತಿಯನ್ನು ಸರ್ಕಾರಕ್ಕೆ ಮಾಡಿಕೊಳ್ಳುತ್ತೇನೆ, ಅದೇನೆಂದರೆ ನಿಮ್ಮ ಮುಖ್ಯ ಮಂತ್ರಿಗಳು ತಮಿಳುನಾಡಿಗೆ ಪತ್ರ ಬರೆಯಬಹುದು, ಆ ಮುಖ್ಯಮಂತ್ರಿಗಳು ಇವರಿಗೆ ಪತ್ರ ಬರೆಯಬಹುದು, ದಿನಾಂಕ ನಿಶ್ಚಯವಾಗಬಹುದು, ನೀವು ಏನೋ ಮಾತುಕತೆಯನ್ನು ಪ್ರಾರಂಭ ಮಾಡಬಹುದು. ಹಿಂದೆ ನಮ್ಮ ಸರ್ಕಾರದ ಸ್ಪಷ್ಟ ನಿಲುವು ಇಲ್ಲದ ಕಾರಣ ಈ ಗೊಂದಲದಲ್ಲಿ ನಾವು ಸಿಕ್ಕಿಕೊಂಡು ಆಗಲೇ ನಮ್ಮ ರಾಜ್ಯದ ಜನ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದಾರೆ. ಮುಂದೆ ನೀವು ಎರಡು ರಾಜ್ಯದ ಮುಖ್ಯಮಂತ್ರಿಗಳು ಮಾತುಕತೆ ಮಾಡುತ್ತೀರಿ ಎನ್ನುವುದಾದರೆ ಮಾತುಕತೆ ಮಾಡುವುದಕ್ಕೆ ಮುಂದೆ ಇದೇ ರೀತಿ ಹೇಗೆ ವಿರೋಧ ಪಕ್ಷದ ವಿಶ್ವಾಸವನ್ನು ತೆಗೆದುಕೊಂಡರೋ, ಮಾತುಕತೆ ಕಾಲದಲ್ಲಿ ಮುಖ್ಯಮಂತ್ರಿಗಳ ಜೊತೆಯಲ್ಲಿ ನೀವು ಏನು ಬೇಕಾದರೂ ಮಾತನಾಡಿಕೊಳ್ಳಿ, ಆದರೆ ಆದರ ಬಗ್ಗೆ ವಿರೋದ ಪಕ್ಷಗಳ ಜೊತೆ ಕುಳಿತು ಚರ್ಚೆ ಮಾಡಿ ಒಂದು ಹನಿ ನೀರು ನಮ್ಮ ಹಕ್ಕಿಗೆ ಧಕ್ಕೆ ಬರದ ರೀತಿಯಲ್ಲಿ ಮಾತುಕತೆ ಆಗಬೇಕಾಗಿದೆ. ಆದರ ಬಗ್ಗೆ ನೀವು ಏನೇ ಪತ್ರವ್ಯವಹಾರ ಮಾಡಿದರೂ ಸಹ ಮೊದಲು ವಿರೋಧ ಪಕ್ಷಗಳನ್ನು ಕರೆದು ವ್ಯಾಪಕವಾಗಿ ಚರ್ಚೆಮಾಡಿ ನಮ್ಮ ನಿಲುವು ಏನು ಎನ್ನುವುದನ್ನು ಸ್ಪಷ್ಟ ಮಾಡಿಕೊಂಡು ನಂತರ ಮಾತುಕತೆಗೆ ನೀವು ಹೋಗಬೇಕೇ ಹೊರತು ಆದಕ್ಕಿಂತ ಮುಂಚೆ ತರಾತುರಿಯಲ್ಲಿ ಸುಪ್ರೀಂ ಕೋರ್ಟು ಹೇಳಿದೆಯೆಂದು ನೀವು ಏನೋ ಮಾಡಿಕೊಂಡು ನಂತರ ನಾವೆಲ್ಲರೂ ಸಿಕ್ಕಿಹಾಕಿಕೊಂಡು ಒದ್ದಾಡುವಂಥ ಪರಿಸ್ಥಿತಿಗೆ ಬರಬಾರದು. ಬಹುಶಃ ಸಾಕಷ್ಟು ತಿಳುವಳಿಕೆಯುಳ್ಳ ನಮ್ಮ ನೀರಾವರಿ ಸಚಿವರು ಆ ಸಂಧಿಗ್ಧತೆಯನ್ನು ತರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮುಂಚೆ ಆದರ ಬಗ್ಗೆ ಸಮಾಲೋಚನೆ ಆಗಬೇಕು. ಸುಪ್ರೀಂ ಕೋರ್ಟಿನಲ್ಲಿ ಏನು ಆದೇಶ ಆಗಿದೆ ಅದು ಪತ್ರಿಕೆಗಳಲ್ಲಿ ಅಲ್ಪಸ್ವಲ್ಪ ಮಾತ್ರ ಬಂದಿದೆ. ಆದರ ಸಂಪೂರ್ಣ ವಿವರವನ್ನು ನೀರಾವರಿ ಸಚಿವರು ತಿಳಿಸುವ ದೃಷ್ಟಿಯಿಂದ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

+**ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :-** ಮಾನ್ಯ ಅಧ್ಯಕ್ಷರೆ, ನಮ್ಮ ಸುಪ್ರೀಂ ಕೋರ್ಟ್ ಲಾಯರ್ ಆಗಿರತಕ್ಕಂಥ ಶ್ರೀ ಮೋಹನ್ ಕಾತರ್ಕಿಯವರು ಫೋನ್ ಮುಖಾಂತರ ಮತ್ತು ಫ್ಯಾಕ್ಸ್ ಮೆಸೇಜ್ ಮುಖಾಂತರ

ಸುಪ್ರೀಂ ಕೋರ್ಟಿನ ಹಿಯರಿಂಗ್ ಸ್ಟೇಜ್‌ನಲ್ಲಿ O.S. 1/1992 before the Supreme Court, Cauvery Water Dispute ಏನು ಇದೆಯೋ, ಆ ಇಂಟರಿಮ್ ಆವಾರ್ಡ್‌ಗೆ ಇಂಪ್ಲಿಮೆಂಟೇಷನ್ ಮಾಡುವುದಕ್ಕೆ ಡೈರೆಕ್ಷನ್ ಕೊಡಬೇಕೆಂದು ಏನು ತಮಿಳುನಾಡು ಕೇಳಿಕೊಂಡಿದ್ದರೋ ಆ ಹಿನ್ನೆಲೆಯೊಳಗೆ hearing stage ನಲ್ಲಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಕುಳಿತು ಮಾತನಾಡಿಕೊಳ್ಳತಕ್ಕಂಥದ್ದು ಬಹಳ ಸೂಕ್ತವಾಗಿದೆ ಎಂದು ಗೌರವಯುತ ನ್ಯಾಯಧೀಶರುಗಳು ಹೇಳಿದರು. ಆದ್ದರಿಂದ ನಾವು ಎರಡೂ ಕೌನ್ಸಿಲ್‌ಗೆ ಹೇಳುತ್ತೇನೆ. ನಿಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ನಮ್ಮ ಫೀಲಿಂಗನ್ನು ತಿಳಿಸಿ ಆರ್ಲಿಯೆಸ್ಟ್ ಡೇಟ್‌ನ ಒಳಗೆ ಮೀಟ್ ಆಗಬೇಕು. ಅದನ್ನು ಇವತ್ತೇ ಕೋರ್ಟಿಗೆ ತಿಳಿಸಬೇಕೆಂದು ಹೇಳಿದ್ದಾರೆ. ಅವರ ಸೂಚನೆ ಮೇಲೆ ನಮ್ಮ ಮೋಹನ್ ಕಾತರ್ಕಿಯವರು ನನ್ನ ಹತ್ತಿರ ಮಾತನಾಡಿದ್ದಾರೆ, ಮತ್ತು ಬೇರೆ ಎಲ್ಲರ ಹತ್ತಿರ ಮಾತನಾಡಿದ ಮೇಲೆ ನಾವು ತಮಿಳುನಾಡು ಮುಖ್ಯಮಂತ್ರಿಗಳಿಗೆ ನಿನ್ನೆ ರಾತ್ರಿಯ ವೇಳೆಗೆ ಒಂದು ಫ್ಯಾಕ್ಸ್ ಮೆಸೇಜ್ ಕಳುಹಿಸಿ ಅದರಲ್ಲಿ, ನಮಗೆ ಇಲ್ಲಿ ಅಧಿವೇಶನ ನಡೆಯುತ್ತಿದೆ.

> `` We have received a communication from the Supreme Court Advocate Mohan Katarki in the context of the Supreme Court hearing which took place today on the Cauvery Water Dispute. It appears that in the course of the proceedings the hon'ble Bench advised that Chief Minister of Karnataka and Tamil Nadu meet together as soon as possible in order to find an amicable solution" ಅಂತ ಹೇಳಿದಕ್ಕೆ ತಮಿಳುನಾಡು ಮುಖ್ಯಮಂತ್ರಿಗಳಿಗೆ ಹೀಗೇ ಪತ್ರ ಬರೆದಿದ್ದಾರೆ "I personally welcome the advice of the Supreme Court very warmly and I do hope that you would reciprocate my sentiments. While I would like to have this meeting held as soon as possible you may be aware that our Legislature is now in session which could make it little difficult for me to meet prior to August 14th"

ಯಾವುದಾದರೂ ಡೇಟ್ ಹಾಕಿಕೊಳ್ಳಿ ಎಂದು ಹೇಳಿದ್ದಾರೆ. ಮತ್ತು ಇವತ್ತು ಬೆಳಿಗ್ಗೆ 9-45 ಗಂಟೆಗೆ ನಮಗೆ ಕರುಣಾನಿಧಿಯವರು ನಮ್ಮ ಮುಖ್ಯಮಂತ್ರಿಗಳಿಗೆ ಫ್ಯಾಕ್ಸ್ ಮಾಡಿ ಹೇಳಿದ್ದಾರೆ. ಅದರಲ್ಲಿ ಅವರು ಇದೇ ರೀತಿಯಾಗಿ ವಿವರಣೆ ಕೊಡುತ್ತಾ ಈ ತಿಂಗಳು 4 ನೇ ತಾರೀಖು ನನಗೆ ಬೇರೆ ಕೆಲಸ ಇದೆ. 4 ನೇ ತಾರೀಖು ಬಿಟ್ಟು ಬೇರೆ ಆರ್ಲಿಯೆಸ್ಟ್, ಡೇಟ್‌ನ್ನು ನೀವು ಹಾಕಿಕೊಳ್ಳಬೇಕು. ಈ ಮೀಟಿಂಗ್‌ನ್ನು ನಮ್ಮ ಮದರಾಸಿನಲ್ಲಿ ಮಾಡಬೇಕು. ಮತ್ತು ನಮ್ಮ ಅತಿಥಿಗಳಾಗಿ ನೀವು ಮತ್ತು ನಿಮ್ಮ ಟೀಂ ಬರಬೇಕು,

" I am also advised by the Supreme Court Bench yesterday during the hearing of the interlocutary application of Tamil Nadu seeking a mandatory direction to the Karnataka to implement the interim award of Cauvery water Dispute Tribunal

"Kindly let me know when we could meet at the earliest. The venue can be Madras and I trust that you would find it convenient. I have pleasure to invite you and your team here to be our guest"

ಎಂದು ಹೇಳಿ ಈಗಾಗಲೇ ಕರುಣಾನಿಧಿಯವರು ಕಾಗದ ಬರೆದಿದ್ದಾರೆ. ಇವತ್ತು ನಾವು ಭೇಟಿಯಾಗುವ ದಿನಾಂಕವನ್ನು ಕೋರ್ಟಿಗೆ ತಿಳಿಸಬೇಕು. 14 ರ ನಂತರ ಭೇಟಿಯಾಗಬಹುದೆಂದು ನಾವು ಹೇಳಿದ್ದೆವು, ಅವರು 4 ದಿವಸ ಬಿಟ್ಟು ಫಸ್ಟ್ ವೀಕ್‌ನಲ್ಲಿ ಎಂದು ಹೇಳಿದ್ದಾರೆ. ಆದಷ್ಟು ಬೇಗನೆ ಮೀಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಬೈ ಇವನಿಂಗ್ ನಮ್ಮ ಲಾಯರ್‌ಗೆ ಫ್ಯಾಕ್ಸ್ ಮಾಡಿದ್ದೇವೆ. ಅವರೂ ಸಹ ಕಳುಹಿಸಿದ್ದಾರೆಂದು ಅಂದುಕೊಂಡಿದ್ದೇನೆ. ಆದಷ್ಟು ಬೇಗನೆ ಮೀಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಸದನಕ್ಕೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.... ನಂತರ ಆ ಸುದ್ದಿಯನ್ನು ಸದನಕ್ಕೆ ಬಂದ ತಕ್ಷಣ ತಿಳಿಸಬೇಕಾಗಿತ್ತು ಎಂದು ಮಾನ್ಯ ನಂಜೇಗೌಡರು ಹೇಳಿದರು. ವಿರೋದ ಪಕ್ಷದ ನಾಯಕರ ಗಮನಕ್ಕೆ ತಂದು ನಂತರ ಸದನಕ್ಕೆ ತಿಳಿಸಬೇಕು ಎಂದು ಅಂದುಕೊಂಡಿದ್ದೆ. ಅಲ್ಲಿಗೆ ಮೀಟಿಂಗ್‌ಗೆ ಹೋಗುವುದಕ್ಕೆ ಮುಂಚೆ ವಿರೋಧ ಪಕ್ಷದ ಸದಸ್ಯರ ಕಾನ್‌ಫಿಡೆನ್ಸ್ ತೆಗೆದುಕೊಂಡು ಹೇಳಿದರೆ ತಪ್ಪು ಏನೂ ಇಲ್ಲ. ಖಂಡಿತವಾಗಿಯೂ ಮೀಟಿಂಗ್ ಕರೆದು ಕುಳಿತು ಮಾತನಾಡಿ ಅವರೆಲ್ಲರ ಸಲಹೆಗಳನ್ನು, ಆಡ್‌ವೈಸ್‌ಗಳನ್ನು ಇನ್‌ಫಾರ್ಮಲ್ ಆಗಿ ತೆಗೆದುಕೊಂಡು ಹೋಗುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇವೆ. ಫಸ್ಟ್ ಫೇಸ್ ಆಲಮಟ್ಟಿ ಏನು ಇದೆ, ಅದಕ್ಕೆ ಏನು ಸ್ಟೇ ಕೊಟ್ಟಿದ್ದರು ಅದನ್ನು ರಿಮೂವ್ ಮಾಡಿದ್ದಾರೆ. 2ನೆಯದು ಬಹಳ ಮುಖ್ಯವಾದ ಜಡ್ಜ್‌ಮೆಂಟ್ ಏನೆಂದರೆ ಕೃಷ್ಣ ವ್ಯಾಲಿ ಅಥಾರಿಟಿ ಕಾನ್ಸ್ಟಿಟ್ಯೂಟ್ ಮಾಡಬೇಕು. ಎರಡೂ ರಾಜ್ಯಗಳವರು ಕುಳಿತು ಮಾತುಕತೆ ಮಾಡಿ ಒಂದು ವಾರದಲ್ಲಿ ನೀವು ಕೃಷ್ಣಾ ವ್ಯಾಲಿ ಅಥಾರಿಟಿ ಕಾನ್ಸ್ಟಿಟ್ಯೂಟ್ ಮಾಡುವುದಕ್ಕೆ ಸಿ.ಡಬ್ಲ್ಯೂ.ಸಿ.ಯವರ ಹತ್ತಿರ ಕುಳಿತು ಮಾತನಾಡಬೇಕು. ಒಂದು ಪಕ್ಷ ಈ ಸ್ಕೀಂನ್ನು ಒಂದು ವಾರದೊಳಗೆ ನೀವು ಇಂಪ್ಲಿಮೆಂಟ್ ಮಾಡಲಿಲ್ಲ ಎಂದರೆ to implement (B) scheme I will direct the Government of India to constitute Krishna Value Authority.

ಶ್ರೀ ಹೆಚ್. ಎನ್. ನಂಜೇಗೌಡ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿರುವುದರಲ್ಲಿ ಸ್ವಲ್ಪ ಕನ್‌ಫ್ಯೂಕ್ಷನ್ ಆಗಿ ಬಿಟ್ಟಿದೆ. ಕೃಷ್ಣಾ ವ್ಯಾಲಿ ಅಥಾರಿಟಿ ಎಂದರೇನು? ಮತ್ತು ಸ್ಕೀಂ (ಬಿ) ಎಂದರೇನು? ಕೃಷ್ಣಾ ಪ್ರಾಜೆಕ್ಟ್ ಎಂದರೆ ಏನು?

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೆ, let us not get into confusion. I will read it.

> "All the parties have stated before the Supreme Court that they would comply with the award of Krishna Water Dispute Tribunal. The Central Government, Central Water Commissioner will call a meeting of party states i.e. Karnataka, Andhra Pradesh, Maharashtra in one week. If all the parties are agreed to constitute an authority called Krishna Value Authority as suggested in the award may be formed for implementation of the award as per Scheme-B. If the parties do not arrive at an agreement, the court may consider it to direct the Central Government to form the authority"

12.10 ಪಿ. ಎಂ.

ಫೇಸ್ ಎರಡರ ಬಗ್ಗೆ ವಾರದಲ್ಲಿ ಕುಳಿತುಕೊಂಡು ಮಾತನಾಡಿಕೊಂಡು ಬನ್ನಿ ಎಂದು ಹೇಳಿದ್ದಾರೆ.

MR. SPEAKER :- I do not know whether it is clear to you. The Court has suggested ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಮಗೆ ಈಗ ಎರಡು ಪ್ರಶ್ನೆಗಳು ಬರುತ್ತದೆ. ಯಥಾಸ್ಥಿತಿ ಮೇನ್‌ಟೇನ್ ಮಾಡಬೇಕೆಂದು ಹೇಳಿದ್ದಾರೆ.

SRI K.N. NAGEGOWDA :- Status-quo maintain ಮಾಡುವ ಬಗ್ಗೆ.

Sri. Mallikarjuna Kharge :- But they have directed to constitute a Krishan Valley Authority as per Scheme 'B' ಅಂದರೆ ಏನಾಯಿತು ಸ್ಕೀಂ (ಬಿ) ನಲ್ಲಿ ಅವರಿಗೆ ಏನೇನು ಸಿಗಬೇಕೋ ಅದರ ಬಗ್ಗೆ ಆಗುತ್ತದೆಯೇ ಹೊರತು ನಮ್ಮ ಸ್ಕೀಂ (ಎ) ನಲ್ಲಿ ನಮಗೆ 734 ಟಿ.ಎಂ.ಸಿ. ನೀರಿನ ಬಗ್ಗೆ ಬಂದಾಗ ನ್ಯಾಚರಲಿ ನಾವು ಉಪಯೋಗಿಸಿದಂತಹ ನೀರನ್ನು ಬಹುಶಃ 'ಬಿ' ಗೆ ಶೇಪ್ಟ್ ಆಗಿ ಹೋದಮೇಲೆ ಕೊನೆಗೆ ತೊಂದರೆಗೆ ಬರುತ್ತದೆ. ಅದಕ್ಕಾಗಿ ಬಹುಶಃ ಬಹಳ ಕೇರ್‌ಫುಲ್ ಆಗಿ ನೋಡತಕ್ಕಂತಹ ಅವಶ್ಯಕತೆ ಇದೆ.

MR. SPEAKER :- All that is mentioned in the Order is to examine constitutinal Authority Called Krishna Valley Authority to

protect the proposals of the Batchawat Award, keeping in view the Scheme ('B') and if all the concerned States do not come together to constitute such an authority then the court will direct the Central Government to constitute such an Authority. Let's see that. ಆದನ್ನು ಏಕೆ ನಾವು ಈಗ ನೋಡುವುದು.

SRI. M. MALLIKHARJUNA KHARGE :- Sir, atleast he can call a meeting. ಶ್ರೀ ನಂಜೇಗೌಡರು ಇರುತ್ತಾರೆ ವಿರೋಧ ಪಕ್ಷದ ನಾಯಕರು ಇರುತ್ತಾರೆ ಚರ್ಚೆಯನ್ನು ಮಾಡೋಣ, ಏಕೆಂದರೆ (INTERRUPTIONS) suggestion of the Supreme Court, that is also important.

ಶ್ರೀ ಕೆ. ಎನ್. ನಾಗೇಗೌಡ :- ಸ್ಟೇಜ್ ಒನ್, ಸ್ಟೇಜ್ ಟು ಎಂದು ಇದೆ. ಸ್ಟೇಜ್ ಒನ್ ಮತ್ತು ಸ್ಟೇಜ್ ಟೂ ಗೆ ಯಥಾಸ್ಥಿತಿ ಮೈನ್‌ಟೈನ್ ಆಗಬೇಕೆಂದು ಆದು earlier ಆರ್ಡರ್ ಇದ್ದದ್ದು. ಈಗ ಸ್ಟೇಜ್ ಒನ್‌ಗೆ ಯಥಾಸ್ಥಿತಿ ಮೈನ್‌ಟೈನ್ ಇಲ್ಲ ಎನ್ನುವುದನ್ನು They have removed the stay. Stage II dam portion ಗೆ ಮಾತ್ರ one week ಒಳಗೆ CWCನವರು ಕರೆದು ಮಾತನಾಡಬೇಕೆಂದು ಹೇಳಿದರು ಎಂದು ಹೇಳಿ ನಮ್ಮ ವಕೀಲರುಗಳು ಹೇಳಿದ್ದಾರೆ. Judgement ಕಾಪಿಯಲ್ಲಿಯೂ ಕೂಡ ಇದೆ. ಆದಕ್ಕೆ ಒಂದು ಮೀಟಿಂಗ್‌ನ್ನು ಕರೆಯುತ್ತೇನೆ. ಮೀಟಿಂಗ್‌ನಲ್ಲಿ ನಾವು ಅವರುಗಳು ಕುಳಿತುಕೊಂಡು ಎಲ್ಲಾ pros and cons ಗಳನ್ನು ಯೋಜನೆಯನ್ನು ಮಾಡಿ 21-8-1996 hearing ಇದೆ. ಅಷ್ಟರಲ್ಲಿ ಕುಳಿತುಕೊಂಡು ಮಾತನಾಡುತ್ತೇವೆ.

MR. SPEAKER :- The language implied is what is written there and the language being used by the Minister there is a little difference which has caused you some kind of annoyance. I have gone through the verbatim Order, you can trust me. It is not as he is putting it, it is I am putting it. It is only a suggestion to constitute such an Authroity and in the case if all the States fail to constitute such an Authority, then the Court will think of directing the Central Government to constitute such an Authority.

SRI. H.N. NANJEGOWDA :- Even then it would be dangerous.

MR. SPEAKER :- Let's take it up afterwards. we have sufficient time. Out immediate problem was...

(INTERUPTIONS)

SRI. K.N. NAGEGOWDA :- Sir, it is a judgement. We will discuss. ನಾನು ನಿಮಗೆ ಕಾಪಿಯನ್ನು ಕಳುಹಿಸಿಕೊಡುತ್ತೇನೆ, ತಾವುಗಳು ನೋಡಿ, ನಾವುಗಳೆಲ್ಲರೂ ಕುಳಿತುಕೊಂಡು ಚರ್ಚೆಯನ್ನು ಮಾಡೋಣ.

MR. SPEAKER :- Please circulate the copy.

(4) ಗಮನ ಸೆಳೆಯುವ ಸೂಚನೆ

ವಿಷಯ :- (ಅ) ರಾಜ್ಯದಲ್ಲಿ ಮಟ್ಕಾ ಜೂಜಿನ ಹಾವಳಿಯಿರಿದ ಜನರಿಗೆ ಉಂಟಾಗಿರುವ ತೊಂದರೆ.

ಶ್ರೀ ಆರ್. ನಾರಾಯಣ (ಬೆಳ್ಳಾವಿ) :- ರಾಜ್ಯದಲ್ಲಿ ಮಟ್ಕಾಜೂಜಿನ ಹಾವಳಿಯಿಂದ ಜನರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ **ಶ್ರೀ ಆರ್. ರೋಷನ್ ಬೇಗ್** (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಟ್ಕಾ ಮತ್ತು ಜೂಜಾಟ ಇದೊಂದು ಸಾಮಾಜಿಕ ಪಿಡುಗಾಗಿದ್ದು ಇದರಿಂದ ಲಕ್ಷಾಂತರ ಕುಟುಂಬಗಳು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ತೊಂದರೆ ಅನುಭವಿಸುತ್ತಿದ್ದಾರೆ. ಈ ಅನಿಷ್ಠ ಪಿಡುಗನ್ನು ನಿರ್ಮೂಲನ ಮಾಡಲು ರಾಜ್ಯ ಪೋಲೀಸರು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಪೋಲೀಸರು ತೆಗೆದುಕೊಂಡು ಕಟ್ಟುನಿಟ್ಟಿನ ಕ್ರಮದಿಂದಾಗಿ ಮಟ್ಕಾ ಮತ್ತು ಜೂಜಾಟ ಪ್ರಕರಣಗಳಲ್ಲಿ ಗಮನಾರ್ಹ ಇಳಿಮುಖವಾಗಿದೆ. ಜೂಜಾಟವನ್ನು ವೃತ್ತಿಯನ್ನಾಗಿ ಮಾಡಿಕೊಂಡು ತನ್ನ ಕುಟುಂಬ ಹಾಗೂ ಸಮಾಜಕ್ಕೆ ಹೊರೆಯಾಗಿರುವ ವ್ಯಕ್ತಿಗಳಿಗೆ ಪೋಲೀಸರು ನಡೆಸುವ ದಾಳಿಯಿಂದಾಗಿ ಈ ಜೂಜಾಟವನ್ನು ಬಿಡಬೇಕಾಗಿ ಬಂದಿರುವ ಪರಿಸ್ಥಿತಿ ಒದಗಿಬಂದಿದೆ. ಅಲ್ಲದೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಪೋಲೀಸರು ಪತ್ತೆ ಹಚ್ಚಿರುವ ಮಟ್ಕಾ ಮತ್ತು ಜೂಜಾಟದ ಪ್ರಕರಣಗಳನ್ನು ಗಮನಿಸಿದರೆ ಇತ್ತೀಚಿನ ವರ್ಷಗಳಲ್ಲಿ ಇದು ಕಡಿಮೆಯಾಗಿದೆ ಎಂಬ ಅಂಶ ಗಮನಾರ್ಹವಾದುದು, ಈ ಸಾಮಾಜಿಕ ಪಿಡುಗನ್ನು ಪೂರ್ತಿಯಾಗಿ ತೊಲಗಿಸುವುದೇ ಸರ್ಕಾರದ ನೀತಿಯಾಗಿದ್ದು ಎಷ್ಟೋ ಮಟ್ಕಾ ಮತ್ತು ಜೂಜಾಟದ ಕೇಂದ್ರಗಳನ್ನು ಬೆಂಗಳೂರು ಸೇರಿ ಕೆಲವೊಂದು ನಗರಗಳಲ್ಲಿ ಮುಚ್ಚಲಾಗಿವೆ. ಸರ್ಕಾರ 1985 ರಲ್ಲಿ ಆಂಟಿ ಗೂಂಡಾ ಕಾಯ್ದೆಯನ್ನು ರಚಿಸಲಾಗಿದ್ದು ಇದರಡಿಯಲ್ಲಿ ಮಟ್ಕಾ ಮತ್ತು ಜೂಜಾಟದ ದಂಧೆಯಲ್ಲಿರುವ ದುಷ್ಕರ್ಮಿಗಳನ್ನು ಒಂದು ವರ್ಷದ ವರೆಗೆ ಬಂಧನದಲ್ಲಿಡುವುದಕ್ಕೆ ಪೋಲೀಸ್ ಆಯುಕ್ತರಿಗೆ ಮತ್ತು ಜಿಲ್ಲಾ ದಂಡಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಹಾಗೂ ಇತರೆ ನಗರ ಪಟ್ಟಣಗಳಲ್ಲಿ ಜೂಜಾಟದ ಕೇಂದ್ರಗಳು ಮುಚ್ಚಿರುವುದನ್ನು ಗಮನಿಸಬಹುದು.